## ಚುಟುಕು ಸುದ್ದಿ

### ನಗರದಲ್ಲಿ ಹೈಟೆಕ್ ವೇಶ್ಯಾವಾಟಿಕೆ ಬಯಲು

**ಸಂ.ಕ. ಸಮಾಚಾರ ಮೈಸೂರು**
ಆಪ್ ಬಳಸಿಕೊಂಡು ಸ್ಪಾ ಹೆಸರಿನಲ್ಲಿ ಹೈಟೆಕ್ ವೇಶ್ಯಾವಾಟಿಕೆ ನಡೆಸುತ್ತಿದ್ದ ಸ್ಥಳವೊಂದರ ಮೇಲೆ ದಾಳಿ ನಡೆಸಿದ ಸಿಸಿಬಿ ಪೊಲೀಸರು ಮೂವರು ಮಹಿಳೆಯರನ್ನು ರಕ್ಷಿಸುವುದರೊಡನೆ ಸ್ಪಾ ನಡೆಸುತ್ತಿದ್ದ ಮಹಿಳೆಯನ್ನು ಬಂಧಿಸಿದ್ದಾರೆ.

ಇದೇ ವೇಳೆ ಮೂವರು ಗ್ರಾಹಕರನ್ನು ಸಹಾ ವಶಕ್ಕೆ ಪಡೆಯಲಾಗಿದೆ.

ಖಚಿತ ಮಾಹಿತಿ ಮೇರೆಗೆ ವಿದ್ಯಾರಣ್ಯಪುರಂ ಪೊಲೀಸ್ ಠಾಣಾ ವ್ಯಾಪ್ತಿಯ ಸೂಯೆಜ್ ಫಾರಂ ರಸ್ತೆಯ ಬ್ಯೂಟಿ ಪಾರ್ಲರ್ ಅಂಡ್ ಸ್ಪಾ ಸೆಂಟರ್ ಒಂದ ಮೇಲೆ ಈ ದಾಳಿ ನಡೆದಿದೆ.

ಈ ವೇಳೆ ಮೂವರು ಮಹಿಳೆಯರಿಗೆ ಹಣದ ಆಮಿಷ ತೋರಿಸಿ ಅವರನ್ನು ವೇಶ್ಯಾವಟಿಕೆ ಬಳಸಿಕೊಳ್ಳುತ್ತಿತ್ತು ಎನ್ನಲಾಗಿದ್ದು, ಈ ಹಿನ್ನೆಲೆಯಲ್ಲಿ ಮಹಿಳೆಯೊಬ್ಬರನ್ನು ವಶಕ್ಕೆ ಪಡೆಯಲಾಗಿದೆ ಆಪ್‌ಮೂಲಕ ಗ್ರಾಹಕರನ್ನ ಸೆಳೆಯಲಾಗುತ್ತಿರುವುದು ತನಿಖೆ ವೇಳೆ ಬಯಲಾಗಿದೆ. ಆನ್‌ಲೈನ್‌ನಲ್ಲೇ ಗ್ರಾಹಕರಿಂದ ಹಣ ಪಡೆಯುತ್ತಿದ್ದುದೂ ಸಹ ಖಚಿತಪಟ್ಟಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ಈ ಕುರಿತು ಪ್ರಕರಣ ದಾಖಲಾಗಿದ್ದು ತನಿಖೆ ನಡೆಯುತ್ತಿದೆ.

### ಚಾಮುಂಡಿ ಉತ್ಸವ

**ಸಂ.ಕ. ಸಮಾಚಾರ ಮೈಸೂರು**
ಹೂಟಗಳ್ಳಿಯ ಕೆಎಚ್‌ಬಿ ಬಡಾವಣೆಯ ಚಾಮುಂಡೇಶ್ವರಿ ಸೇವಾ ಸಮಿತಿ ವತಿಯಿಂದ ಬರುವ ಆಗಸ್ಟ್ ಒಂದು ಮತ್ತು ಎರಡರಂದು ಈ ಬಾರಿಯೂ ಚಾಮುಂಡೇಶ್ವರಿ ಅಮ್ಮನವರ ವರ್ಧಂತಿ ಮತ್ತು ಉತ್ಸವ ಆಯೋಜಿಸಲಾಗಿದೆ ಎಂದು ಸಮಿತಿ ಅಧ್ಯಕ್ಷ ಎಸ್. ಸಿದ್ದರಾಜು ತಿಳಿಸಿದರು.

ಒಂದರಂದು ಬೆಳಗ್ಗೆ ಆರರಿಂದ ಹತ್ತರವರೆಗೆ ಬಡಾವಣೆಯ ಮುಖ್ಯ ಬೀದಿಗಳಲ್ಲಿ ವಿವಿಧ ಕಲಾ ತಂಡಗಳೊಡನೆ ಚಾಮುಂಡೇಶ್ವರಿ ಉತ್ಸವ ಜರುಗಲಿದೆ. ಎರಡರಂದು ಮಧ್ಯಾಹ್ನ ಸುಮಾರು 15 ಸಾವಿರ ಜನಕ್ಕೆ ಅನ್ನಸಂತರ್ಪಣೆ ನಡೆಯಲಿದೆ ಎಂದರು. ಮಂಜುನಾಥಶೆಟ್ಟಿ, ಶಿವಮಲ್ಲು, ಬೋಪಯ್ಯ ಹಾಜರಿದ್ದರು.

### ರೈತರಿಗೆ ಭೂಮಿ ಹಕ್ಕು ನೀಡಿ

**ಸಂ.ಕ. ಸಮಾಚಾರ ಮೈಸೂರು**
ನಮೂನೆ 57 ರಲ್ಲಿಎಚ್.ಡಿ.ಕೋಟೆ, ಸರಗೂರು, ನಂಜನಗೂಡು, ಹುಣಸೂರು ಹಾಗೂ ಪಿರಿಯಾಪಟ್ಟಣ ತಾಲೂಕುಗಳಲ್ಲಿ ಬಾಕಿ ಇರುವ ಅರ್ಜಿಗಳಿಗೆ ಸಂಬಂಧಿಸಿದಂತೆ ಬಗರ್‌ಹುಕುಂ ಸಾಗುವಳಿದಾರರಿಗೆ ಹಕ್ಕುಪತ್ರ ವಿತರಿಸಲು ಜಿಲ್ಲಾಡಳಿತ, ತಾಲೂಕು ಆಡಳಿತ ಕ್ರಮ ಕೈಗೊಳ್ಳಬೇಕೆಂದು ಕರ್ನಾಟಕ ಭೂ ಹಕ್ಕುದಾರರ ವೇದಿಕೆ ಸಂಚಾಲಕ ಶಿವಲಿಂಗಯ್ಯ ಮನವಿ ಮಾಡಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ವೇದಿಕೆಯು ಕಳೆದ ಐದಾರು ವರ್ಷಗಳಿಂದ ರೈತರ ಪರವಾಗಿ, ಅವರ ಸಮಸ್ಯೆಗಳು, ಬಗರ್ ಹುಕುಂ ಸಾಗುವಳಿ ವಿಚಾರದಲ್ಲಿ ಕೆಲಸ ಮಾಡುತ್ತಿದೆ. ಸದ್ಯದಲ್ಲಿ ಮೈಸೂರಿನ ನಾಲ್ಕು ವಿಧಾನಸಭಾ ಕ್ಷೇತ್ರಗಳಾದ ಎಚ್.ಡಿ. ಕೋಟೆ, ನಂಜನಗೂಡು, ಹುಣಸೂರು ಮತ್ತು ಪಿರಿಯಾಪಟ್ಟಣಗಳಲ್ಲಿ ಕೆಲಸ ಆರಂಭಿಸಿದೆ.

ಸುಮಾರು 50–60 ವರ್ಷಗಳಿಂದ ಭೂಮಿಯನ್ನು ಉಳುಮೆ ಮಾಡುತ್ತತಮ್ಮಕುಟುಂಬ ನಿರ್ವಹಣೆಗಾಗಿ ಈ ಭೂಮಿಯನ್ನೇ ನಂಬಿ ನಮೂನೆ 53 ಮತ್ತು 57 ರಲ್ಲಿಅನೇಕರುಅರ್ಜಿ ಸಲ್ಲಿಸಿದ್ದಾರೆ.ಯಾವುದಾದರೊಂದು ದಿನ ಈ ಭೂಮಿಗೆ ಸಾಗುವಳಿ ಮಾನ್ಯತೆಸಿಗುತ್ತದೆ ಎಂಬ ಭರವಸೆಇವರದಾಗಿದೆ. ಆದರೆಇವರಿಗೆ ಭೂಮಿಯ ಹಕ್ಕು ಸಿಗದ ಕಾರಣದಿಂದಾಗಿ ಸರ್ಕಾರದ ಸವಲತ್ತುಗಳಿಂದ ವಂಚಿತರಾಗಿದ್ದಾರೆ.ಆದ್ದರಿಂದ ಸರ್ಕಾರಈಗಲಾದರೂ ಹಕ್ಕುಪತ್ರಗಳನ್ನು ಅರ್ಹರೈತರಿಗೆ ನಿಡಬೇಕೆಂದು ಮನವಿ ಮಾಡಿದರು.

ಇದೆ ವೇಳೆ ಸದ್ಯದಲ್ಲಿ ನಮೂನೆ 57 ರಅಡಿಯಲ್ಲಿ ಎಚ್.ಡಿ.ಕೋಟೆಯಲ್ಲಿ 7850, ಸರಗೂರು ತಾಲೂಕಿನಲ್ಲಿ 3325, ನಂಜನಗೂಡು ತಾಲೂಕಿನಲ್ಲಿ 5584, ಹುಣಸೂರು ತಾಲೂಕಿನಲ್ಲಿ 3458 ಮತ್ತು ಪಿರಿಯಾಪಟ್ಟಣ ತಾಲೂಕಿನಲ್ಲಿ 4876 ಅರ್ಜಿಗಳು ಬಾಕಿ ಇವೆ.ಎಚ್.ಡಿ.ಕೋಟೆ, ಸರಗೂರು ತಾಲೂಕುಗಳಲ್ಲಿ ಭೂಸಕ್ರಮೀಕರಣ ಸಮಿತಿಆದಷ್ಟು ಶೀಘ್ರ ತನ್ನ ಕೆಲಸ ಆರಂಭಿಸಬೇಕು, ಜೊತೆಗೆಇನ್ನಿತರ ತಾಲೂಕುಗಳಲ್ಲಿ ಭೂ ಸಕ್ರಮೀಕರಣ ಸಮಿತಿರಚಿಸಬೇಕೆಂದು ಒತ್ತಾಯಿಸಿದರು. ವೆಂಕಟಾಭೋವಿ, ರಾಜಮುಡಿ, ಕೆ.ಎಂ.ಸುಶೀಲಾ ಹಾಜರಿದ್ದರು.



**ಟಿ.ನರಸೀಪುರದ ತಹಸಿಲ್ದಾರ್ ಕಚೇರಿಯಲ್ಲಿ ತಾಲೂಕಿನ ಪ್ರವಾಹ ಪೀಡಿತ ಪ್ರದೇಶ ಕುರಿತ ಪರಿಶೀಲನಾ ಸಭೆ ನಡೆಯಿತು. ಅಪರ ಜಿಲ್ಲಾಧಿಕಾರಿ ಪಿ ಶಿವರಾಜು ನೇತೃತ್ವ ವಹಿಸಿದ್ದರು. ತಾಲೂಕಿನ ತಹಸಿಲ್ದಾರರು, ತಾಪಂ ಇಒ ಹಾಗೂ ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು ಪಾಲ್ಗೊಂಡಿದ್ದರು.**

### ಕಬಿನಿ ಕಾವೇರಿ ತೀರದ ಜನತೆಗೆ ಎಚ್ಚರಿಕೆ ರವಾನೆ | ಹೊರಹರಿವು ಪ್ರಮಾಣ 2.8 ಲಕ್ಷ ಏರಿಕೆ ಸಾಧ್ಯತೆ

# 2ಲಕ್ಷ ಕ್ಯೂಸೆಕ್‌ಗೂ ಹೆಚ್ಚು ನೀರು ಹೊರಕ್ಕೆ

### ಎಲ್ಲೆಡೆ ಕಟ್ಟೆಚ್ಚರ

**ಮೈಸೂರು ಜಿಲ್ಲೆಯ ತಿ. ನರಸೀಪುರದ ವರೆಗೆ ಕಾವೇರಿ ಮತ್ತು ಕಬಿನಿ ನದಿಗಳು ಪ್ರತ್ಯೇಕವಾಗಿ ಹರಿಯುತ್ತವೆ. ಈ ಪಟ್ಟಣದಲ್ಲಿ ನದಿಗಳು ಒಟ್ಟಿಗೇ ಸೇರುವುದರಿಂದ ಎರಡು ಲಕ್ಷ ಕ್ಯೂಸೆಕ್ ಪ್ರಮಾಣದಷ್ಟು ಭಾರೀ ಪ್ರಮಾಣದ ನೀರು ನದಿಯಲ್ಲಿ ಮುಂದೆ ಸಾಗುತ್ತದೆ. ಹೀಗಾಗಿ ನರಸೀಪುರ ಪಟ್ಟಣ ಸೇರಿದಂತೆ ಮುಂದಿನ ಎಲ್ಲಾ ಜನವಸತಿಗಳ ಕಡೆ ಪ್ರವಾಹ ಪರಿಸ್ಥಿತಿ ಉಲ್ಬಣಿಸಲಿದೆ. ಕಾವೇರಿ ಮತ್ತು ಕಬಿನಿ ಹರಿಯುವ ಎಚ್.ಡಿ. ಕೋಟೆ, ನಂಜನಗೂಡು, ಮೈಸೂರು ತಾಲ್ಲೂಕು, ಶ್ರೀರಂಗಪಟ್ಟಣ ತಾಲ್ಲೂಕು, ತಿ. ನರಸೀಪುರ ತಾಲ್ಲೂಕು, ಮಳವಳ್ಳಿ ಹಾಗೂ ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕು ಮತ್ತು ಬೆಂಗಳೂರು ದಕ್ಷಿಣ ಜಿಲ್ಲೆಯ ಕನಕಪುರ ತಾಲ್ಲೂಕಿನ ಜನತೆ ಹೆಚ್ಚು ಎಚ್ಚರ ವಹಿಸಬೇಕಾದ ಸ್ಥಿತಿ ನಿರ್ಮಾಣವಾಗಿದೆ.**



ಅಬ್ಬರಿಸುತ್ತಿರುವ ಕಬಿನಿ

**ಸಂ.ಕ. ಸಮಾಚಾರ ಮೈಸೂರು**
ಕಾವೇರಿ ಜಲಾನಯನ ಪ್ರದೇಶಗಳಲ್ಲಿ ಭಾರೀ ಪ್ರಮಾಣದ ಮಳೆ ಬೀಳುತ್ತಿದೆ. ಈ ಹಿನ್ನೆಲೆಯಲ್ಲಿ ಕೆಆರ್‌ಎಸ್ ಹಾಗೂ ನೆರೆ ಕೇರಳ ರಾಜ್ಯದ ವೈನಾಡಿನಲ್ಲಿ ಜೋರು ಮಳೆಯಾಗುತ್ತಿರುವುದರಿಂದ ಕಬಿನಿ ಜಲಾಶಯಗಳಿಗೆ ಹೆಚ್ಚು ನೀರು ಹರಿದುಬರುತ್ತಿದೆ. ಈ ಎರಡೂ ಜಲಾಶಯಗಳನ್ನೂ ಒಟ್ಟುಗೂಡಿದಂತೆ ಸುಮಾರು ಎರಡು ಲಕ್ಷ ಕ್ಯುಸೆಕ್‌ಗೂ ಹೆಚ್ಚು ಪ್ರಮಾಣದ ನೀರನ್ನು ಹೊರ ಹರಿಯಬಿಡಲಾಗುತ್ತಿದೆ.

ಮತ್ತೊಂದು ಕಡೆ, ಹೇಮಾವತಿ ಜಲಾನಯನ ಪ್ರದೇಶದಲ್ಲಿಯೂ ಭಾರೀ ಪ್ರಮಾಣದಲ್ಲಿ ಮಳೆಯಾಗುತ್ತಿದ್ದು ಇಲ್ಲಿಂದ ಸುಮಾರು ಒಂದು ಲಕ್ಷ ಕ್ಯೂಸೆಕ್ ಪ್ರಮಾಣದಲ್ಲಿ ಹೊರ ಹರಿವು ಬಿಡುವ ಸಾಧ್ಯತೆಯಿದೆ. ಹೀಗಾಗಿ ಕೆಆರ್‌ಎಸ್‌ನಿಂದ ಇನ್ನೂ ಹೆಚ್ಚುವರಿ ಪ್ರಮಾಣದ ನೀರು ಹರಿಸುವ ಸಾಧ್ಯತೆಯೂ ದಟ್ಟವಾಗಿದೆ.

ಇಂತಹ ಕಠಿಣ ಸ್ಥಿತಿ ತಲೆದೋರಿರುವುದರಿಂದ ಮಂಡ್ಯ, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಜನತೆ ಹಾಗೂ ಕಾವೇರಿ ತಗ್ಗು ಪ್ರದೇಶ, ನದಿಯ ಎರಡೂ ಬದಿಗಳ ಜನತೆ ತಮ್ಮ ಆಸ್ತಿ ಪಾಸ್ತಿ, ಜಾನುವಾರು ರಕ್ಷಣೆಗೆ ಎಚ್ಚರ ವಹಿಸಿ ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ ಕಾವೇರಿ ನೀರಾವರಿ ನಿಗಮ ಸೂಚಿಸಿದೆ.

ಕೆಆರ್‌ಎಸ್‌ನಿಂದ ಸುಮಾರು 1.10 ಲಕ್ಷ ಹಾಗೂ ಕಬಿನಿ ಜಲಾಶಯದಿಂದ 80 ಸಾವಿರ ಕ್ಯುಸೆಕ್‌ಗೂ ಹೆಚ್ಚು ಪ್ರಮಾಣದ ನೀರನ್ನು ಹೊರ ಹರಿಯಬಿಡಲಾಗುತ್ತಿದೆ. ಈ ಪ್ರಮಾಣ ಕಾಲ ಕ್ರಮೇಣ ಹೆಚ್ಚುವ ಸಾಧ್ಯತೆಯೂ ಇದೆ. ಹೀಗಾಗಿ ನದಿ ತೀರ ಪ್ರದೇಶಗಳ ಜನತೆ ಸೂಕ್ತ ಮುಂಜಾಗರೂಕತೆ ವಹಿಸಿ ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ ನಿರ್ದೇಶನ ನೀಡಲಾಗಿದೆ.

### ಕಬಿನಿ ಹರಿವಿನ ಪ್ರದೇಶ


ವಿಶೇಷವಾಗಿ ನಂಜನಗೂಡು ತಾಲ್ಲೂಕು, ಮೈಸೂರು ತಾಲ್ಲೂಕು ಮತ್ತು ನರಸೀಪುರ ತಾಲ್ಲೂಕು ಕಬಿನಿ ಪ್ರವಾಹಕ್ಕೆ ಒಳಗಾಗಿವೆ. ನದಿ ತೀರದ ಸುತ್ತೂರು, ನಂಜನಗೂಡು ನಗರ ಮತ್ತು ಇನ್ನಿತರ ಕಡೆ ಪ್ರವಾಹ ಪರಿಸ್ಥಿತಿ ನಿರ್ಮಾಣವಾಗಿದೆ.

### ನರಸೀಪುರದಲ್ಲಿ ಆತಂಕ

ಮೈಸೂರು ಜಿಲ್ಲೆಯ ತಿ. ನರಸೀಪುರದ ವರೆಗೆ ಕಾವೇರಿ ಮತ್ತು ಕಬಿನಿ ನದಿಗಳು ಪ್ರತ್ಯೇಕಾಗಿ ಹರಿಯುತ್ತದೆ. ಈ ಪಟ್ಟಣದಲ್ಲಿ ನದಿಗಳು ಒಟ್ಟಿಗೇ ಸೇರುವುದರಿಂದ ಎರಡು ಲಕ್ಷ ಕ್ಯೂಸೆಕ್ ಪ್ರಮಾಣ ಮೀರುವ ಭಾರೀ ಪ್ರಮಾಣದ ನೀರು ನದಿಯಲ್ಲಿ ಮುಂದೆ ನುಗ್ಗಿ ಹರಿಯುತ್ತದೆ. ಹೀಗಾಗಿ ನರಸೀಪುರ ಪಟ್ಟಣ ಸೇರಿದಂತೆ ಮುಂದಿನ ಎಲ್ಲಾ ಜನವಸತಿಗಳ ಕಡೆ ಪ್ರವಾಹ ಪರಿಸ್ಥಿತಿ ಉಲ್ಬಣಿಸಲಿದೆ. ಮುಖ್ಯವಾಗಿ ಕೊಳ್ಳೇಗಾಲ ತಾಲ್ಲೂಕಿನ ಯಡಕುರಿಯ ಸೇರಿದಂತೆ ಕೆಲ ಗ್ರಾಮಗಳು ಸಂಪರ್ಕ ಕಳೆದುಕೊಳ್ಳುವ ಆತಂಕ ತಲೆದೋರಿದೆ. ಈ ಹಿನ್ನೆಲೆಯಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾಡಳಿತಗಳು ಜನರನ್ನು ಕಾಳಜಿ ಕೇಂದ್ರಗಳಿಗೆ ಸ್ಥಳಾಂತರಿಸುವ ಪ್ರಕ್ರಿಯೆ ಆರಂಭಿಸಿದೆ. ಕಾವೇರಿ ಹರಿವಿನ ಚಾಮರಾಜನಗರ ಜಿಲ್ಲಾ ಪ್ರದೇಶದಲ್ಲಿ ಹೆಚ್ಚಿನ ಆತಂಕ ಮೂಡಿದೆ.

## ಭೈರತಿ ವಿರುದ್ಧ ಮುಗಿಬಿದ್ದ ಎಚ್ವಿ

**■ ಸಿಎಂ ಹೆಸರಿಗೆ ಮಸಿ ಬಳಿಯುತ್ತಿರುವ ಆರೋಪ**



**ಸಂ.ಕ. ಸಮಾಚಾರ ಮೈಸೂರು**
ನಗರಾಭಿವೃದ್ಧಿ ಸಚಿವ ಮಂತ್ರಿಯಲ್ಲ 'ಕಂತ್ರಿ' ಎಂದು ಜರಿದ ಬಿಜೆಪಿ ಎಂಎಲ್‌ಸಿ ಎಚ್. ವಿಶ್ವನಾಥ್, ಆತ ಒಬ್ಬ ರಿಯಲ್ ಎಸ್ಟೇಟ್ ಗಿರಾಕಿಯಾಗಿದ್ದು, ಸಿದ್ದರಾಮಯ್ಯ ಹೆಸರಿಗೆ ಮಸಿ ಬಳಿಯುತ್ತಿದ್ದಾನೆ ಎಂದು ಏಕ ವಚನದಲ್ಲಿ ಕಿಡಿಕಾರಿದರು.

ಮೈಸೂರಿನಲ್ಲಿ ಮಂಗಳವಾರ ಸುದ್ದಿಗಾರರೊಡನೆ ಮಾತನಾಡಿ, ಒಟ್ಟು ಹಗರಣದ ಹಿಂದೆ ನಗರಾಭಿವೃದ್ಧಿ ಸಚಿವ ಇದ್ದಾರೆ. ಏನೇನೋ ಕಡತ ಹೆಲಿಕಾಪ್ಟರ್‌ನಲ್ಲಿ ಬಂದು ಕೊಂಡೊಯ್ದಿದ್ದಾರೆ ಎಂಬ ಮಾಹಿತಿಇದೆ. ಈ ಪ್ರಕರಣದಲ್ಲಿ ಅವರನ್ನು ಹಾಗೆಯೆ ಉಳಿಸಿರುವುದು ಸರಿಯಲ್ಲ.

ಜೊತೆಗೆ ಹಗರಣದಲ್ಲಿ ಪಾತ್ರ ವಹಿಸಿರುವ ಮುಡಾದ ಈ ಹಿಂದಿನ ಆಯುಕ್ತರನ್ನು ಕೇವಲ ವರ್ಗ ಮಾಡಲಾಗಿದೆ. ಇವರ ವಿರುದ್ಧವೂ ಕ್ರಮ ಕೈಗೊಳ್ಳಬೇಕಾಗಿತ್ತು. ಜೊತೆಗೆ ತನಿಖೆ ಸಿಬಿಐಗೆ ವಹಿಸುವ ಮೂಲಕ ಯಾರು ಯಾರು ಅಕ್ರಮದಲ್ಲಿ ಭಾಗಿಯಾಗಿದ್ದಾರೆ ಎಂಬುದನ್ನು ಹೊರ ತೆಗೆಯಬಹುದಾಗಿತ್ತೆಂದರು.

ಸುಮಾರು 189 ಕೋಟಿ ರೂ.,ಗಳ ವಾಲ್ಮೀಕಿ ಹಗರಣಕ್ಕೆ ಸಂಬಂಧಿಸಿದಂತೆ ಓರ್ವ ಸಚಿವನ ತಲೆದಂಡವಾಗಿದೆ. ಆದರೆ ಸುಮಾರು ಐದು ಸಾವಿರ ಕೋಟಿ ಅಂದಾಜಿನ ಮುಡಾ 50:50 ಅನುಪಾತದ ಹಗರಣಕ್ಕೆ ಸಂಬಂಧಿಸಿದಂತೆ ಕೇವಲ ಅಧಿಕಾರಿಗಳ ವರ್ಗ ಸರಿಯೇ ಎಂದು ಖಾರವಾಗಿ ಪ್ರಶ್ನಿಸಿದರು.

ಹಗರಣಗಳ ಬಳಿಕ ಸಿಎಂ ಏಕಾಂಗಿಯಾಗಿದ್ದಾರೆ. ಅವರ ಬಿಳಿ ಪಂಚೆಯಲ್ಲಿ ಕಪ್ಪುಚುಕ್ಕೆ ಕಾಣುತ್ತಿದೆ. ತಮಗೆ ಸುತ್ತಿಕೊಂಡಿರುವ ಆರೋಪದಿಂದ ಹೊರ ಬರಲು ಮುಡಾದಿಂದ ತಮ್ಮ ಪತ್ನಿ ಹೆಸರಿಗೆ ಬಂದಿರುವ ನಿವೇಶನಗಳನ್ನು ವಾಪಸು ಮಾಡಬೇಕು. 40 ವರ್ಷಗಳಲ್ಲಿ ಗೌರವಯುತ ರಾಜಕಾರಣ ಮಾಡಿಕೊಂಡು ಬಂದಿರುವ ಅವರು ಈಗ ಈ ವಿಷಯದಲ್ಲಿ ಆಸೆ ಪಡುವುದು ಬೇಡ ಎಂದರು.

ಸಿ.ಎಚ್. ವಿಜಯಶಂಕರ್ ಅವರನ್ನು ಮೇಘಾಲಯದ ರಾಜ್ಯಪಾಲರನ್ನಾಗಿ ನೇಮಕ ಮಾಡಿರುವುದನ್ನು ಸ್ವಾಗತಿಸಿದರಲ್ಲದೆ, ಈ ವೇಳೆ ನೀವೂ ಯಾರ ವಿರುದ್ಧವೂ ಮಾತನಾಡದೇ ಇದ್ದಿದ್ದರೆ ನಿಮಗೂ ಇಂತಹ ಸ್ಥಾನ ದೊರೆಯುತ್ತಿತ್ತೆ ಎಂಬ ಪ್ರಶ್ನೆಗೆ, ನನ್ನ ಮನೆಗೆ ನಾನೇ ರಾಜ್ಯಪಾಲ, ಸದಾ ಮೌನವಾಗಿರುವುದು ನನಗೆ ಒಗ್ಗದು. ನನ್ನದು ಒಂಟಿ ಧ್ವನಿ, ಗಟ್ಟಿ ಧ್ವನಿ ಎಂದು ಉತ್ತರಿಸಿದರು. ಇದೇ ವೇಳೆ ಮುಡಾ ಹಗರಣ ಕುರಿತ ವಿಪಕ್ಷಗಳ ಪಾದಯಾತ್ರೆಯಲ್ಲಿ ತಾವೂ ಪಾಲ್ಗೊಳ್ಳುತ್ತಿರುವುದಾಗಿ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

## ದೊಡ್ಡ ಬೆಕ್ಕುಗಳಿಂದ ಅರಣ್ಯ ಸಂರಕ್ಷಣೆ



**ಸಂ.ಕ. ಸಮಾಚಾರ ಮೈಸೂರು**
ದೇಶದಲ್ಲಿ ಕೆಲ ವರ್ಷಗಳಿಂದ ಹುಲಿ, ಚಿರತೆ ಸೇರಿದಂತೆ ಬೆಕ್ಕಿನ ಜಾತಿಯ ದೊಡ್ಡ ಪ್ರಾಣಿಗಳ ಸಂಖ್ಯೆ ಹೆಚ್ಚಳವಾಗುತ್ತಿರುವುದರಿಂದ ಅರಣ್ಯ ಸಂಪತ್ತಿನ ಸಂರಕ್ಷಣೆಯೂ ಆಗುತ್ತಿದೆ ಎಂದು ಅಂತರರಾಷ್ಟ್ರೀಯ ದೊಡ್ಡ ಬೆಕ್ಕುಗಳ ಒಕ್ಕೂಟವಾಗಿರುವ ಐಬಿಸಿಎ ಯೋಜನಾ ನಿರ್ದೇಶಕ ಸೌಮಿತ್ರ ದಾಸ್‌ಗುಪ್ತ ಅಭಿಪ್ರಾಯಪಟ್ಟರು.

ನಗರದ ಚಾಮರಾಜೇಂದ್ರ ಮೃಗಾಲಯದಲ್ಲಿ 'ವಿಶ್ವ ಹುಲಿ ದಿನ'ದ ಪ್ರಯುಕ್ತ ಮಂಗಳವಾರ 'ದೊಡ್ಡ ಬೆಕ್ಕುಗಳ ಸಂರಕ್ಷಣೆಗೆ ಪರಿಣಾಮಕಾರಿ ಕ್ರಮಗಳು' ಕುರಿತು ನಡೆದ ಎರಡು ದಿನಗಳ ವಿಚಾರ ಸಂಕಿರಣದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಭಾರತದಲ್ಲಿ ಅಳಿವಿನಂಚಿಗೆ ದೂಡಲ್ಪಟ್ಟಿದ್ದ ಹುಲಿ, ಆನೆ, ಚಿರತೆ, ಘೇಂಡಾಮೃಗ ಸೇರಿದಂತೆ ಇನ್ನಿತರ ಪ್ರಾಣಿಗಳ ಸಂಖ್ಯೆಯಲ್ಲಿ ಆದ ಹೆಚ್ಚಳವೂ ಅರಣ್ಯ ಸಂರಕ್ಷಣೆಗೆ ಕಾರಣವಾಗಿದೆ. ಇದಕ್ಕೆ ಕೇವಲ ಅರಣ್ಯ ಇಲಾಖೆ ಮಾತ್ರವಲ್ಲದೆ, ಸಿಬ್ಬಂದಿ ಹಾಗೂ ಸಮುದಾಯದ ಸಹಕಾರವೂ ಕಾರಣವಾಗಿದೆ. ಇದರಿಂದ ಭೂಮಿ ಮೇಲಿನ ಜೀವವೈವಿಧ್ಯತೆಯ ಉಳಿದಿದೆ ಎಂದು ತಿಳಿಸಿದರು.

ದೊಡ್ಡಬೆಕ್ಕುಗಳಿರುವ ಅರಣ್ಯವು ಸಸ್ಯ ಹಾಗೂ ಪ್ರಾಣಿ ಸಂಪತ್ತಿನಿಂದ ಸಮೃದ್ಧವಾಗಿರುತ್ತದೆ. ದೊಡ್ಡಬೆಕ್ಕುಗಳ ಪಟ್ಟಿಯಲ್ಲಿರುವ ಪ್ರಾಣಿಗಳ ಸಂರಕ್ಷಣೆಗಾಗಿ ಹಲವು ಕಾರ್ಯಕ್ರಮ ನಡೆಸಲಾಗುತ್ತಿದ್ದು, ಹುಲಿ, ಸಿಂಹ, ಚಿರತೆ, ಹಿಮ ಚಿರತೆ, ಚೀತಾ, ದಕ್ಷಿಣ ಅಮೆರಿಕದ ಜಾಗ್ವಾರ್, ಉತ್ತರ ಅಮೇರಿಕದ ಪುಮಾ ಸಂರಕ್ಷಣೆ ಮಾಡಲು 'ಅಂತರರಾಷ್ಟ್ರೀಯ ದೊಡ್ಡ ಬೆಕ್ಕುಗಳ ಒಕ್ಕೂಟ' ರಚನೆಯಾಗಿದೆ. ಇದರಲ್ಲಿ ಈಗಾಗಲೇ 21 ದೇಶಗಳು ಸಹಿ ಹಾಕಿ, ದೊಡ್ಡ ಬೆಕ್ಕುಗಳ ಸಂರಕ್ಷಣೆಗಾಗಿ ರೂಪಿಸಿರುವ ನೀತಿಗಳ ಅನುಷ್ಠಾನಕ್ಕೆ ಸಮ್ಮತಿಸಿದೆ ಎಂದು ವಿವರಿಸಿದರು.

ಸಾಕ್ಷ್ಯಚಿತ್ರ ಪ್ರದರ್ಶಿಸಲಾಯಿತು. ಕಾರ್ಯಕ್ರಮದಲ್ಲಿ ಮನೋವಿಜ್ಞಾನಿ ಡಾ. ಮೇವಾ ಸಿಂಗ್, ಭಾರತೀಯ ವನ್ಯಜೀವಿ ಸಂಸ್ಥೆಯ ವಿಜ್ಞಾನಿ ಡಾ. ಖಮರ್ ಖುರೇಷಿ, ಮೃಗಾಲಯದ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಡಾ. ಸುನಿಲ್ ಪನ್ವಾರ್, ಮೃಗಾಲಯ ಕಾರ್ಯನಿರ್ವಾಹಕ ನಿರ್ದೇಶಕ ಡಿ. ಮಹೇಶ್ ಕುಮಾರ್ ಇದ್ದರು.

## ಜಿಲ್ಲಾದ್ಯಂತ ಸತತ ಸುರಿಯುತಿದೆ ಜಡಿ ಮಳೆ



**ಸಂ.ಕ. ಸಮಾಚಾರ ಮೈಸೂರು**
ಬೆಳಗ್ಗೆಯ ಹತ್ತರ ವೇಳೆ ಆರಂಭವಾಗಿ ಸುಮಾರು ಸಂಜೆ ನಾಲ್ಕರವರೆಗೆ ಸತತ ಸುರಿದ ಜಡಿ ಮಳೆ ನಗರದ ಸಾಮಾನ್ಯ ಜನಜೀವನಕ್ಕೆ ಅಡಚಣೆಯುಂಟು ಮಾಡಿತು. ಇದೇ ವಾತಾವರಣ ಜಿಲ್ಲಾದ್ಯಂತ ಕಂಡು ಬಂದಿದೆ. ಅರಣ್ಯದಂಚಿನ ಹೆಗ್ಗಡದೇವನ ಕೋಟೆ, ಹುಣಸೂರು ಮತ್ತು ಪಿರಿಯಾಪಟ್ಟಣಗಳಲ್ಲಿಯೂ ಮಳೆ ಅಬ್ಬರಿಸಿದೆ. ಇನ್ನು, ಇದೇ ರೀತಿಯ ವಾತಾವರಣ ಇನ್ನೂ ಕೆಲ ದಿನಗಳ ಕಾಲ ಮುಂದುವರಿಯಲಿದೆ ಎಂಬ ಮುನ್ಸೂಚನೆಯಿಂದಾಗಿ ಜನತೆ ಮತ್ತಷ್ಟು ಕಂಗೆಡುವಂತಾಗಿದೆ.

ಬೆಳಗ್ಗಿನ ಕಚೇರಿ ಕೆಲಸ ಕಾರ್ಯ, ಶಾಲಾ ಕಾಲೇಜುಗಳಿಗೆ ತೆರಳಿದವರು ಮಧ್ಯಾಹ್ನದ ವೇಳೆ ಆರಂಭವಾದ ಮಳೆಯಿಂದಾಗಿ ಸಮಸ್ಯೆಗೊಳಗಾದರು. ಮುಖ್ಯವಾಗಿ ವಿದ್ಯಾರ್ಥಿಗಳು ಮಳೆ ಕಾರಣದಿಂದಾಗಿ ಸಕಾಲಕ್ಕೆ ಮನೆಗೆ ವಾಪಸಾಗಲು ಸಾಧ್ಯವಾಗದೇ ಪರದಾಡಿದರು.

ಇನ್ನು, ಮಳೆ ಕಾರಣ ಪ್ರಮುಖವಾಗಿ ದ್ವಿಚಕ್ರ ವಾಹನ ಸವಾರರು ಕಿರಿಕಿರಿ ಎದುರಿಸಿದರು. ಆದರೆ ಮಳೆ ಜೋರು ಪ್ರಮಾಣದಲ್ಲೇನೂ ಬೀಳದ ಕಾರಣದ ರಸ್ತೆಗಳಲ್ಲಿ ನೀರು ಹರಿಯುವ, ಇಲ್ಲವೇ ಕೆ.ಆರ್. ವೃತ್ತ, ಹಾರ್ಡಿಂಜ್ ವೃತ್ತ ಮೊದಲಾದ ಕಡೆ ನೀರು ನಿಂತು ಸಂಚಾರಕ್ಕೆ ವ್ಯತ್ಯಯವುಂಟಾಗುವ ಸಮಸ್ಯೆ ಎದುರಾಗಲಿಲ್ಲ.

ಆದರೆ ಪ್ರಮುಖ ವಾಣಿಜ್ಯ ಕೇಂದ್ರಗಳಾದ ದೇವರಾಜ ಮಾರುಕಟ್ಟೆ, ಚಿಕ್ಕ ಗಡಿಯಾರ, ಧನ್ವಂತ್ರಿ ರಸ್ತೆಯ, ಸಯ್ಯಾಜಿರಾವ್ ರಸ್ತೆ, ಅಗ್ರಹಾರ ವೃತ್ತ, ವಾಣಿ ವಿಲಾಸ ವೃತ್ತ ಮೊದಲಾದ ಕಡೆಗಳಲ್ಲಿ ವ್ಯಾಪಾರಕ್ಕೆ ಅಡಚಣೆಯುಂಟಾಯಿತು.

ಮುಖ್ಯವಾಗಿ ಈ ಸ್ಥಳಗಳಲ್ಲಿನ ಬೀದಿ ಬದಿ ವ್ಯಾಪಾರಿಗಳು ಮಳೆ ಕಾರಣ ಗ್ರಾಹಕರು ಬಾರದ ಪರಿಸ್ಥಿತಿ ಒಂದೆಡೆಯಾದರೆ, ಗಾಡಿಗಳು, ನೆಲದಲ್ಲಿ ಹಾಕಿದ್ದ ಸರಕುಗಳು ನೆನೆಯದಂತೆ ನೋಡಿಕೊಳ್ಳಲು ತ್ರಾಸ ಪಟ್ಟರು.

ಇದಲ್ಲದೆ, ನಗರದ ವಿವಿಧ ಬಡಾವಣೆಗಳಿಗೆ ತಳ್ಳು ಗಾಡಿಗಳಲ್ಲಿ ಹೂ, ಹಣ್ಣು, ತರಕಾರಿ ಮೊದಲಾದವನ್ನು ಕೊಂಡೊಯ್ದು ಮಾರಾಟ ಮಾಡುವ ನೂರಾರು ಮಂದಿ ಮಳೆ ಕಾರಣ ಸಂಜೆವರೆಗೂ ಕಾಯಬೇಕಾಯಿತು. ಹಲವರು ಈ ವೇಳೆ ಹೋದಲ್ಲಿ ವ್ಯಾಪಾರವಾಗದು ಎಂಬ ಕಾರಣದಿಂದಾಗಿ ಎಂದಿನ ಚಟುವಟಿಕೆಯನ್ನೇ ಆರಂಭಿಸದ ಪರಿಸ್ಥಿತಿಯೂ ಹಲವೆಡೆ ಕಂಡು ಬಂದಿತು.

ಈ ನಡುವೆ ಬೆಳಗ್ಗೆಯೇ ಕೂಲಿ ಕೆಲಸಕ್ಕೆಂದು ಬಂದವರು ನಂತರ ಆರಂಭವಾದ ಮಳೆ ಕಾರಣ ಕೆಲಸವನ್ನು ಅರ್ಧಕ್ಕೇ ನಿಲ್ಲಿಸಿ, ಗಳಿಕೆ ಇಳಿಕೆಯಾದ ಬಗ್ಗೆ ಚಿಂತಿತರಾದರು.

ಆದರೆ ಸಂಜೆ ವೇಳೆಗೆ ಮಳೆ ನಿಂತ ಕಾರಣ ಎಂದಿನ ಜನಜೀವನ ಸಾಮಾನ್ಯ ಪರಿಸ್ಥಿತಿಗೆ ಬಂದ ಹಿನ್ನೆಲೆಯಲ್ಲಿ ಮಳೆಯಿಂದ ಸಮಸ್ಯೆಗೊಳಗಾಗಿದ್ದವರು ಕೊಂಚ ನೆಮ್ಮದಿಯ ನಿಟ್ಟುಸಿರು ಬಿಡುವಂತಾಯಿತು. ಒಟ್ಟಿನಲ್ಲಿ ಪರಿಸ್ಥಿತಿ ಇನ್ನೂ ಕೆಲ ದಿನ ಮುಂದುವರಿದರೆ ಏನು ಮಾಡುವುದೆಂಬ ಕಳವಳಕ್ಕೆ ಮಂಗಳವಾರದ ಮಳೆ ಹಲವರನ್ನು ದೂಡಿದೆ.

## ಮಾನವ ಕಳ್ಳಸಾಗಣೆ ಅರಿವು ಮೂಡಲಿ



**ಸಂ.ಕ. ಸಮಾಚಾರ ಮೈಸೂರು**
ಗಂಭೀರ ಸಮಸ್ಯೆಯಾಗಿ ಸಮಾಜವನ್ನು ಕಾಡುತ್ತಿರುವ ಮಾನವ ಕಳ್ಳ ಸಾಗಾಣಿಕೆ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ರವೀಂದ್ರ ಹೆಗ್ಡೆ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಶಿಕ್ಷಣ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಇನ್ನಿತರ ಇಲಾಖೆ ಮತ್ತು ಸಂಘಟನೆಗಳು ಆಯೋಜಿಸಿದ್ದ ವಿಶ್ವ ಮಾನವ ಕಳ್ಳ ಸಾಗಾಣಿಕೆ ತಡೆ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.


ಮಾನವ ಕಳ್ಳ ಸಾಗಣಿಕೆ ಎಂಬ ದೊಡ್ಡ ಪಿಡುಗು ನಾಶಮಾಡಲು ಇಲಾಖೆಗಳು, ಸಂಘ ಸಂಸ್ಥೆ ಹಾಗೂ ಸಾರ್ವಜನಿಕರ ಒಗ್ಗಟ್ಟಿನಿಂದ ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು.

ಮಕ್ಕಳು, ಬಡವರಿಗೆ ಉದ್ಯೋಗದ ನೀಡುವುದಾಗಿ ನಂಬಿಸಿ ಅವರನ್ನು ಬಾಲಕಾರ್ಮಿಕಯನ್ನಾಗಿ ಹಾಗೂ ಇತ್ಯಾದಿ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗುವಂತೆ ಮಾಡಲಾಗುತ್ತಿದೆ. ಇಂತಹ ತಪ್ಪಿತಸ್ಥರ ವಿರುದ್ಧ ಕೈಗೊಂಡ ಕ್ರಮಗಳನ್ನು ಮಾಧ್ಯಮಗಳು ಪ್ರಸಾರ ಮಾಡಿ, ಜನರಲ್ಲಿ ಜಾಗೃತಿ ಮೂಡಿಸಬೇಕು ಎಂದು ಸಲಹೆ ನೀಡಿದರು.

ಜಿಪಂ ಸಿಇಒ ಕೆ.ಎಂ. ಗಾಯತ್ರಿ ಮಾತನಾಡಿ, ಸರ್ಕಾರೇತರ ಸಂಸ್ಥೆಗಳು ಮಾನವ ಕಳ್ಳ ಸಾಗಾಣಿಕೆ ತಡೆಯಲು ಕೈಜೋಡಿಸಬೇಕು. ಈ ಕುರಿತ ಜಾಗೃತಿಯಲ್ಲಿ ಪ್ರತಿಯೊಂದು ಇಲಾಖೆಯ ಹಾಗೂ ಸಾರ್ವಜನಿಕರ ಪಾತ್ರ ಬಹಳ ಮುಖ್ಯವಾಗಿದ್ದು ಎಲ್ಲರೂ ಕೈಜೋಡಿಸಬೇಕು ಎಂದು ಕೋರಿದರು.

ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಜಿಲ್ಲಾಧಿಕಾರಿ ಜಿ. ಲಕ್ಷ್ಮಿಕಾಂತ ರೆಡ್ಡಿ, ಹಿರಿಯ ಸಿವಿಲ್ ನ್ಯಾಯಾಧೀಶರಾದ ಬಿ.ಜಿ. ದಿನೇಶ್ , ಡಿಎಚ್‌ಒ ಡಾ.ಪಿ.ಸಿ. ಕುಮಾರಸ್ವಾಮಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಾದ ಮಂಜುನಾಥ್, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಯೋಗೇಶ್ ಮತ್ತಿತರರು ಇದ್ದರು.

## ಸರ್ಕಾರದ ವಿರುದ್ಧ ವಿದ್ಯಾರ್ಥಿಗಳ ಧರಣಿ



**ಸಂ.ಕ. ಸಮಾಚಾರ ಮೈಸೂರು**
ರಾಜ್ಯ ಸರ್ಕಾರ ಪಂಚ ಗ್ಯಾರಂಟಿ ಯೋಜನೆಗಾಗಿ ಎಸ್ಸಿಎಸ್ಟಿ ಅಭಿವೃದ್ಧಿಗೆ ಮೀಸಲಾಗಿದ್ದ ಹಣ ಬಳಸಿಕೊಂಡಿರುವ ರಾಜ್ಯ ಸರ್ಕಾರದ ನಡೆ ಖಂಡಿಸಿ ಮೈಸೂರು ವಿಶ್ವವಿದ್ಯಾನಿಲಯದ ಸಂಶೋಧಕರ ಸಂಘದ ವತಿಯಿಂದ ವಿವಿ ಆವರಣದಲ್ಲಿ ಪ್ರತಿಭಟನೆ ನಡೆಸಲಾಯಿತು.

ಈ ವೇಳೆ ಪ್ರತಿಭಟನಾಕಾರರು ಮಾತನಾಡಿ, 7ಸಿ ಕಾಯ್ದೆ ರದ್ದು ಪಡಿಸಬೇಕು, ಎಸ್ಸಿಎಸ್‌ಪಿ ಟಿಎಸ್‌ಪಿ ಹಣ ದಲಿತರ ಆರ್ಥಿಕ ಅಭಿವೃದ್ಧಿಗೆ ಮಾತ್ರ ಬಳಸಬೇಕು. ಪರಿಶಿಷ್ಟ ಜಾತಿ ಪಂಗಡಗಳ ಪ್ರಬುದ್ಧ ಯೋಜನೆ, ಪ್ರೋತ್ಸಾಹ ಧನ, ವಿದ್ಯಾರ್ಥಿ ವೇತನ ಇತರ ದಲಿತರ ಯೋಜನೆಗಳನ್ನು ಹಿಂದಿನಂತೆ ರೀತಿಯಲ್ಲಿ ಮುಂದುವರಿಸಬೇಕೆಂದು ಆಗ್ರಹಿಸಿದರು.

ಸಂಶೋಧಕರ ಸಂಘದ ಅಧ್ಯಕ್ಷ ಶಿವಶಂಕರ, ಉಪಾಧ್ಯಕ್ಷರ ಕೆ. ಮಲ್ಲೇಶ್, ಗೌರವಾಧ್ಯಕ್ಷ ಮಹೇಶ್, ಪ್ರಧಾನ ಕಾರ್ಯದರ್ಶಿ ಕುಶಾಲ್, ಕಲ್ಲಹಳ್ಳಿ ಕುಮಾರ್, ರಂಗಸ್ವಾಮಿ ಕೆ.ಆರ್. ಮಹೇಶ ಪಿ. ಮರಳ್ಳಿ, ವಜ್ರಮುನಿ, ವರಹಳ್ಳಿ ಆನಂದ, ಸುಪ್ರೀತ್, ಲೋಕೇಶ್, ಸಂಜಯ್, ಜಯ, ಕಾರ್ತೀಕ, ಅಸ್ಕರ್ ಅಲಿ, ಪ್ರತಾಪ್, ನಟರಾಜ್, ದಿಲೀಪ್, ಗಣೇಶ್, ಜಗದೀಶ್ ಮಹದೇವಯ್ಯ, ದಲಿತ ವಿದ್ಯಾರ್ಥಿ ಪರಿಷತ್ ಜಿಲ್ಲಾ ಅಧ್ಯಕ್ಷ ವಿಶ್ವಪ್ರಸಾದ್, ದಲಿತ ವಿದ್ಯಾರ್ಥಿ ಒಕ್ಕೂಟದ ಅಧ್ಯಕ್ಷ ಸಚಿನ್ ರೋಹಿತ್, ಮುತ್ತುರಾಜ್ ಇನ್ನಿತರರು ಪಾಲ್ಗೊಂಡಿದ್ದರು.

**ಬ್ಯಾಂಕ್ ಆಫ್ ಇಂಡಿಯಾ**
**ಮೈಸೂರು ಶಾಖೆ**
बैंक ऑफ़ इंडिया Bank of India BOI
ನಂ. 10–14, "ರಾಯಲ್ ಕ್ರೌನ್", 1ನೇ ಮಹಡಿ, ಅಶೋಕ ರಸ್ತೆ, ಬಿಗ್ ಕ್ಲಾಕ್ ಟವರ್ ಎದುರು, ಮೈಸೂರು–570001. ದೂರವಾಣಿ : 0821–2434517
ಇಮೇಲ್ : mysore.bengaluru@bankofindia.co.in, www.bankofindia.co.in

**ಸ್ವಾಧೀನ ಸೂಚನೆ**
**ಭದ್ರತಾ ಆಸಕ್ತಿ (ಜಾರಿ) ನಿಯಮಗಳು 2002ರ ನಿಯಮ 8(1) ಅಡಿಯಲ್ಲಿ ಸೂಚನೆ**

ಈ ಕೆಳ ಸಹಿದಾರರು **ಬ್ಯಾಂಕ್ ಆಫ್ ಇಂಡಿಯಾದ** ಅಧಿಕೃತ ಅಧಿಕಾರಿಯಾಗಿದ್ದು ಸೆಕ್ಯೂರಿಟೈಜೇಷನ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟ್ರೆಸ್ಟ್ ಆಕ್ಟ್ 2002ರ ಮತ್ತು ಸದರಿ ನಿಯಮದ ಪ್ರಕರಣ 13(2) ಮತ್ತು ಸೆಕ್ಯೂರಿಟಿ ಇಂಟ್ರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 3ರ ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002 ಇದರ ಅನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತಗಾದೆ ಸೂಚನೆಯನ್ನು **ದಿನಾಂಕ: 23.04.2024ರಂದು** ಸಾಲಗಾರರಾದ : **ಶ್ರೀ ಹರೀಶ್ ಗೌಡ .ಕೆ.ಆರ್,** ನಂ. 9, 20ನೇ ಕ್ರಾಸ್, ಅರವಿಂದನಗರ, ಕುವೆಂಪುನಗರ ಅಂಚೆ, ಮೈಸೂರು–570023. **ಜಾಮೀನುದಾರರು : ಶ್ರೀ ಶಮಂತ .ಎಂ.ಎನ್** ಬಿನ್ ನಾರಾಯಣ .ಎಲ್, ವಿಳಾಸ : ನಂ. 40, 8ನೇ ಮೈನ್, 12ನೇ ಕ್ರಾಸ್, ಕೆ.ಹೆಚ್. ರಸ್ತೆ, ಕುವೆಂಪುನಗರ, ಮೈಸೂರು, ಕರ್ನಾಟಕ–570023. ಇವರಿಂದ ಬಾಕಿಯಿರುವ ಮೊತ್ತ **ರೂ. 99,71,089.60** (ರೂಪಾಯಿ ತೊಂಭತ್ತೊಂಭತ್ತು ಲಕ್ಷದ ಎಪ್ಪತ್ತೊಂದು ಸಾವಿರದ ಎಂಭತ್ತೊಂಭತ್ತು ಮತ್ತು ಅರವತ್ತು ಪೈಸೆಗಳು ಮಾತ್ರ) ಮುಂದಿನ ಬಡ್ಡಿ ಮತ್ತು ಖರ್ಚು ವೆಚ್ಚಗಳನ್ನು 60 ದಿನಗಳೊಳಗೆ ಮರುಪಾವತಿಸಲು ಸೂಚಿಸಲಾಗಿತ್ತು.

ಸಾಲಗಾರರು ಸಾಲದ ಹಣವನ್ನು ಮರುಪಾವತಿ ಮಾಡುವಲ್ಲಿ ವಿಫಲರಾಗಿರುವುದರಿಂದ, ಸಾಲಗಾರರು ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಸದರಿ ನಿಯಮ 8 ಅನ್ನು ಓದಿಕೊಂಡಂತೆ ಸದರಿ ಆಕ್ಟ್ ಪ್ರಕರಣ 13(4)ರ ಅನ್ವಯ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಈ ಕೆಳಗೆ ವಿವರಿಸಿದ ಸ್ವತ್ತನ್ನು ಕೆಳಸಹಿದಾರರು **ದಿನಾಂಕ 30ನೇ ಜುಲೈ 2024ರಂದು ಸ್ವಾಧೀನಪಡಿಸಿಕೊಂಡಿರುತ್ತಾರೆ.**

ಸಾಲಗಾರರು/ಜಾಮೀನುದಾರರು ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಕೆ ನೀಡುವುದೇನೆಂದರೆ ಯಾರೂ ಈ ಸ್ವತ್ತಿನ ಬಗ್ಗೆ ವ್ಯವಹಾರ ಮಾಡಬಾರದು ಮತ್ತು ಸದರಿ ಸ್ವತ್ತಿನ ಬಗ್ಗೆ ಯಾವುದೇ ವ್ಯವಹಾರ ನಡೆಸಿದ್ದೇ ಆದರೆ **ಬ್ಯಾಂಕ್ ಆಫ್ ಇಂಡಿಯಾ** ಇವರಿಗೆ ಬಾಕಿಯಿರುವ **ರೂ. 99,71,089.60** (ರೂಪಾಯಿ ತೊಂಭತ್ತೊಂಭತ್ತು ಲಕ್ಷದ ಎಪ್ಪತ್ತೊಂದು ಸಾವಿರದ ಎಂಭತ್ತೊಂಭತ್ತು ಮತ್ತು ಅರವತ್ತು ಪೈಸೆಗಳು ಮಾತ್ರ) ಮುಂದಿನ ಬಡ್ಡಿ ಮತ್ತು ಖರ್ಚು ವೆಚ್ಚಗಳನ್ನು ಪಾವತಿಮಾಡುವ ಜವಾಬ್ದಾರಿಗೆ ಒಳಪಟ್ಟಿರುತ್ತದೆ.

ಸೆಕ್ಷನ್ 13(8)ರ ಕಾಯಿದೆಗಳಲ್ಲಿ ಅವಕಾಶವಿರುವಂತೆ ಸಾಲಗಾರರ ಗಮನಕ್ಕೆ ತರುವುದೇನೆಂದರೆ, ಲಭ್ಯವಿರುವ ಸಮಯದ ಒಳಗೆ ಭದ್ರತಾ ಸ್ವತ್ತುಗಳನ್ನು (ಭದ್ರತಾ ಆಸ್ತಿಗಳನ್ನು) ಮತ್ತೆ ಗಳಿಸಿಕೊಳ್ಳಲು ಅವಕಾಶವಿರುತ್ತದೆ.

**ಸ್ಥಿರಾಸ್ತಿಯ ವಿವರಗಳು**
ಸಮಾನ ಅಡಮಾನದ ವಾಸಯೋಗ್ಯ ಆಸ್ತಿಯು ಸೈಟ್ ನಂ. 10, ಖಾತಾ ನಂ. 473/10, ಪಿಐಡಿ ನಂ. 152200421124023786, ಆರ್‌ಎಸ್‌ಎಲ್ ವಾಸ್ತವ ಕ್ರಿಸ್ಟಲ್ ಪಾರ್ಕ್, ತಳೂರು ಗ್ರಾಮ, ಜಯಪುರ ಹೋಬಳಿ, ಮೈಸೂರು ಜಿಲ್ಲೆ, ಪಿನ್ – 571311, ಈ ಆಸ್ತಿಯು ಶ್ರೀ ಸಮಂತ ಎಂ.ಎನ್ ರವರ ಹೆಸರಿನಲ್ಲಿದೆ. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ : 12.20 ಮೀಟರ್, ಉತ್ತರದಿಂದ ದಕ್ಷಿಣಕ್ಕೆ : (12.09+11.81)/2 ಮೀಟರ್, ಒಟ್ಟು ವಿಸ್ತೀರ್ಣ : 145.79 ಚದರ ಮೀಟರ್‌ಗಳು. **ಚಕ್ಕುಬಂದಿ : ಪೂರ್ವಕ್ಕೆ :** ಸೈಟ್ ನಂ. 9, **ಪಶ್ಚಿಮಕ್ಕೆ :** 09.00 ಮೀಟರ್‌ಗಳ ರಸ್ತೆ, **ಉತ್ತರಕ್ಕೆ :** ಸೈಟ್ ನಂ. 11, **ದಕ್ಷಿಣಕ್ಕೆ :** 09.00 ಮೀಟರ್ ರಸ್ತೆ.

**ದಿನಾಂಕ: 30.07.2024**
**ಸ್ಥಳ: ಮೈಸೂರು**
ಅಧಿಕೃತ ಅಧಿಕಾರಿಗಳು
ಬ್ಯಾಂಕ್ ಆಫ್ ಇಂಡಿಯಾ

**kotak ಕೋಟಕ್ ಮಹೀಂದ್ರ ಬ್ಯಾಂಕ್ ಲಿಮಿಟೆಡ್.,**
ನೋಂದಾಯಿತ ಕಛೇರಿ: 27 ಬಿಕೆಸಿ, ಸಿ27, ಜಿ ಬ್ಲಾಕ್, ಬಾಂದ್ರ ಕುರ್ಲಾ ಕಾಂಪ್ಲೆಕ್ಸ್ ಬಾಂದ್ರ (ಪೂ) ಮುಂಬೈ – 400 051.
ಶಾಖಾ ಕಛೇರಿ: ಕೋಟಕ್ ಮಹೀಂದ್ರ ಬ್ಯಾಂಕ್ ಲಿಮಿಟೆಡ್., ಕೋಟಕ್ ಹೌಸ್, ನಂ. 22, ಎಂ.ಜಿ.ರಸ್ತೆ, ಬೆಂಗಳೂರು–560 001.
ಕಾರ್ಪೋರೇಟ್ ಐಡೆಂಟಿಟಿ: ನಂ.L65110MH1985PLC038137

**ಅನುಬಂಧ–IV–A [ನಿಯಮ 8(6)ರ ನಿಬಂಧನೆಯನ್ನು ಓದಿಕೊಂಡಂತೆ]**

**ಸ್ಥಿರಾಸ್ತಿಗಳ ಮಾರಾಟಕ್ಕಾಗಿ ಇ–ಹರಾಜು ಮಾರಾಟ ಸೂಚನೆ**

**2002 ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ನಿಯಮ 6(2) & 8(6) ಪ್ರಾವಿಸೋದೊಂದಿಗೆ ಓದಿಕೊಂಡಂತೆ 2002 ರ ಹಣಕಾಸು ಆಸ್ತಿಗಳ ಭದ್ರತೆ ಹಾಗೂ ಪುನರ್ ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆಯಡಿ ಹರಾಜು ಮತ್ತು ಮಾರಾಟ ಸೂಚನೆ.**

ಸಾಮಾನ್ಯವಾಗಿ ಸಾಲಗಾರರಿಗೆ ಮತ್ತು ನಿರ್ದಿಷ್ಟವಾಗಿ ಸಾಲಗಾರರಿಗೆ ಸೂಚನೆ ನೀಡುವುದೇನೆಂದರೆ, ಕೆಳಕಂಡಂತೆ ವಿವರಿಸಲಾದ ಆಸ್ತಿ/ಆಸ್ತಿಗಳು ಸ್ಥಿರಾಸ್ತಿ / ಸ್ಥಿರಾಸ್ತಿಗಳು ಭದ್ರತಾ ಸಾಲದಾತರಿಗೆ ಅಡಮಾನಾದ / ಒತ್ತೆಯಿಟ್ಟಿದ್ದು, ಇವುಗಳನ್ನು ಸಾಲಗಾರರಾದ 1) **ಶ್ರೀ ವಿಕ್ರಮ್ ಕುಮಾರ್ ಜೈನ್ ಎಸ್,** ನಂ 1510 1515, ಎಲ್ 3 ಕೊಳದ ಸಂಡಿ ಸ್ಟ್ರೀಟ್, ಲಷ್ಕರ್ ಮೊಹಲ್ಲಾ, ಕರ್ನಾಟಕ ಡೈಗ್ನೋಸ್ಟಿಕ್ಸ್ ಸೆಂಟರ್ ಹತ್ತಿರ, ಮೈಸೂರು – 570001, ಕರ್ನಾಟಕ – ಭಾರತ, **ಶ್ರೀ ವಿಕ್ರಮ್ ಕುಮಾರ್ ಜೈನ್ ಎಸ್,** ಸಂಜೀವಿನಿ ಡೆಂಟಲ್ ಹೆಲ್ತ್ ಕೇರ್, ನಂ 333, 69, ನಾರಾಯಣಶಾಸ್ತ್ರಿ ರಸ್ತೆ, ದೇವರಾಜು ಮೊಹಲ್ಲಾ, ಮೈಸೂರು– 570024; **ಶ್ರೀ ವಿಕ್ರಮ್ ಕುಮಾರ್ ಜೈನ್ ಎಸ್,** ಫ್ಲಾಟ್ ಸಂಖ್ಯೆ ಬಿ 103, ಬಿ ವಿಂಗ್, ಸಾಯಿ ಪ್ರಕಾಶ್ ಧಾಮ, 2ನೇ ಮುಖ್ಯ ರಸ್ತೆ, ಅಂಚೆ ಕಚೇರಿ ರಸ್ತೆ, ಲಕ್ಷ್ಮೀಪುರಂ, ಚಾಮರಾಜ ಮೊಹಲ್ಲಾ, ಮೈಸೂರು–570004 (**ಸಾಲಗಾರರು**); 2. **ಶ್ರೀಮತಿ ಮಮತಾ ಜೈನ್,** ನಂ 1510 1515, ಐ3 ಕೊಳದ ಸಂಡಿ ಬೀದಿ ಲಷ್ಕರ್ ಮೊಹಲ್ಲಾ, ಕರ್ನಾಟಕ ಡಯಾಗ್ನೋಸ್ಟಿಕ್ ಸೆಂಟರ್ ಹತ್ತಿರ, ಮೈಸೂರು – 570001, ಕರ್ನಾಟಕ – ಭಾರತ. **ಮತ್ತು ಇನ್ನೊಂದು ವಿಳಾಸ: ಶ್ರೀಮತಿ ಮಮತಾ ಜೈನ್, ಸಂಜೀವನಿ ಡೆಂಟಲ್ ಹೆಲ್ತ್ ಕೇರ್,** ನಂ 333, 69, ನಾರಾಯಣಶಾಸ್ತ್ರಿ ರಸ್ತೆ, ದೇವರಾಜು ಮೊಹಲ್ಲಾ, ಮೈಸೂರು–570024; **ಶ್ರೀಮತಿ ಮಮತಾ ಜೈನ್,** ಫ್ಲಾಟ್ ಸಂಖ್ಯೆ ಬಿ 103, ಬಿ ವಿಂಗ್, ಸಾಯಿ ಪ್ರಕಾಶ್ ಧಾಮ, 2ನೇ ಮುಖ್ಯ ರಸ್ತೆ, ಪೋಸ್ಟ್ ಆಫೀಸ್ ರಸ್ತೆ, ಲಕ್ಷ್ಮೀಪುರಂ, ಚಾಮರಾಜ ಮೊಹಲ್ಲಾ, ಮೈಸೂರು–570004... (**ಸಹ–ಸಾಲಗಾರರು**) ಇವರಿಂದ ಭದ್ರತಾ ಸಾಲದಾತರಿಗೆ ಬಾಕಿಯಾಗಿರುವ **ರೂ.62,63,047/– (ರೂಪಾಯಿ ಅರವತ್ತೆರಡು ಲಕ್ಷದ ಅರವತ್ತ ಮೂರು ಸಾವಿರದ ನಲವತ್ತೇಳು ಮಾತ್ರ)** ದಿನಾಂಕ : **08–07–2024** ರಂದು ಇದ್ದಂತೆ ಜೊತೆಗೆ ಕರಾರಿನ ದರದಂತೆ ಬಡ್ಡಿ, ಖರ್ಚು ವೆಚ್ಚ ಸೇರಿದ ಮೊತ್ತವನ್ನು ವಸೂಲು ಮಾಡಿಕೊಳ್ಳುವುದಕ್ಕಾಗಿ ಕೋಟಕ್ ಮಹೀಂದ್ರ ಬ್ಯಾಂಕ್ ಲಿಮಿಟೆಡ್(ಭದ್ರತಾ ಸಾಲದಾತರು/ಕೋಟಕ್ ಮಹೀಂದ್ರ ಬ್ಯಾಂಕ್ ಲಿಮಿಟೆಡ್) ಅಧಿಕೃತ ಅಧಿಕಾರಿಗಳು ಸಾಂಕೇತಿಕ/ಭೌತಿಕವಾಗಿ ಸ್ವಾಧೀನತೆಯನ್ನು ಪಡೆದುಕೊಂಡಿದ್ದು, ಇವುಗಳನ್ನು **'ಎಲ್ಲಿ ಹೇಗಿದೆಯೋ ಹಾಗೆಯೇ'** ಮತ್ತು **'ಏನೆಲ್ಲಲ್ಲಿದೆಯೋ ಹಾಗೆಯೇ'** ಆಧಾರದಲ್ಲಿ **19.08.2024** ರಂದು ಮಾರಾಟ ಮಾಡಲಾಗುತ್ತದೆ. **ಸ್ಥಿರಾಸ್ತಿ/ಗಳ ವಿವರಗಳು, ಎನ್ಕಂಬರೆನ್ಸ್ ವಿವರಗಳು, ಮಾರಟದ** ನಿಯಮ ಮತ್ತು ನಿಬಂಧನೆಗಳು ಕೆಳಕಂಡಂತಿವೆ:–

| ಲೋನ್ ಖಾತೆ ನಂ. | ಸಾಲಗಾರರ / ಸಹಸಾಲಗಾರರ ಹೆಸರು | ತಗಾದೆ ಸೂಚನೆ ಮೊತ್ತ ಮತ್ತು ದಿನಾಂಕ | ಮೀಸಲು ಬೆಲೆ (ರೂ.) | ಇಎಂಡಿ (ಮೀಸಲು ಬೆಲೆಯ 10%) ಮತ್ತು ಕೊನೆಯ ದಿನಾಂಕ | ಪರಿವೀಕ್ಷಣೆ ದಿನಾಂಕ ಮತ್ತು ಸಮಯ | ಹರಾಜು ದಿನಾಂಕ ಮತ್ತು ಸಮಯ | ಬಾಕಿ ಮೊತ್ತ | ಎನ್‌ಕಂಬರೆನ್ಸ್ ಏನಾದರೂ ಇದ್ದಲ್ಲಿ |
| --- | --- | --- | --- | --- | --- | --- | --- | --- |
| HF38543150 (CRN 99243890) | 1. ಶ್ರೀ ವಿಕ್ರಮ್ ಕುಮಾರ್ ಜೈನ್ ಎಸ್, 2. ಶ್ರೀಮತಿ ಮಮತಾ ಜೈನ್ | ದಿನಾಂಕ: 10.11.2023 ರೂ.58,57,701.36/– (ರೂಪಾಯಿ ಐವತ್ತೆಂಟು ಲಕ್ಷದ ಐವತ್ತೇಳು ಸಾವಿರದ ಏಳು ನೂರ ಒಂದು ಮತ್ತು ಮೂವತ್ತಾರು ಪೈಸೆ ಮಾತ್ರ) ದಿನಾಂಕ : 09–11–2023 ರಂದು ಇದ್ದಂತೆ | ರೂ.86,16,600/– (ರೂಪಾಯಿ ಎಂಭತ್ತಾರು ಲಕ್ಷದ ಹದಿನಾರು ಸಾವಿರದ ಆರು ನೂರು ಮಾತ್ರ) | ರೂ.8,61,660/– (ರೂಪಾಯಿ ಎಂಟು ಲಕ್ಷದ ಹರವತ್ತೊಂದು ಸಾವಿರದ ಆರು ನೂರ ಅರವತ್ತು ಮಾತ್ರ) ದಿ : 19–08–2024 ರಂದು ಮಧ್ಯಾಹ್ನ 12:00 ಗಂಟೆಯೊಳಗೆ | 9.08.2024 ಬೆಳಿಗ್ಗೆ 10.00 ರಿಂದ ಸಂಜೆ 4.00 ಗಂಟೆ ವರೆಗೆ | 19.08.2024 ಮಧ್ಯಾಹ್ನ 03.00 ಗಂಟೆ ಯಿಂದ ಸಂಜೆ 4:00 ಗಂಟೆ ವರೆಗೆ | ರೂ.62,63,047/– (ರೂಪಾಯಿ ಅರವತ್ತೆರಡು ಲಕ್ಷದ ಅರವತ್ತ ಮೂರು ಸಾವಿರದ ನಲವತ್ತೇಳು ಮಾತ್ರ) ದಿನಾಂಕ 08–07–2024 ರಂದು ಇದ್ದಂತೆ | ಇಲ್ಲ |

ಸ್ಥಿರಾಸ್ತಿ / ಆಸ್ತಿಗಳ ವಿವರಗಳು : **ಷೆಡ್ಯೂಲ್–ಎ:** ಆಸ್ತಿಯ ನಂ.939 CH-6, 939/1 CH-6/1, 939/2 CH-6/2, 939/3 CH-6/3, ಈ ಆಸ್ತಿಯು 2ನೇ ಮುಖ್ಯ ರಸ್ತೆ, ಲಕ್ಷ್ಮೀಪುರಂ, ಚಾಮರಾಜ ಮೊಹಲ್ಲಾ, ಮೈಸೂರುನಲ್ಲಿದ್ದು, ಇದರ ವಿಸ್ತೀರ್ಣ 25734.5 ಚದರ ಅಡಿ, ಆಸ್ತಿಯ ಚಕ್ಕುಬಂದಿ : ಪೂರ್ವಕ್ಕೆ : ಕನ್ಸರ್ವೆನ್ಸಿ ರಸ್ತೆ, ಪಶ್ಚಿಮಕ್ಕೆ : 2ನೇ ಮುಖ್ಯ ರಸ್ತೆ, ಉತ್ತರಕ್ಕೆ : 940 ಲಕ್ಷ್ಮೀಪುರಂ ಸ್ಪೋರ್ಟ್ಸ್ ಕ್ಲಬ್, ದಕ್ಷಿಣಕ್ಕೆ : ನಂ. 938 ಮತ್ತು ಖಾಸಗಿ ಮನೆ. **ಷೆಡ್ಯೂಲ್–ಬಿ:** ವಾಸಯೋಗ್ಯ ಅಪಾರ್ಟ್‌ಮೆಂಟ್ ಫ್ಲಾಟ್ ನಂ. ಬಿ 103, ಬಿ ವಿಂಗ್ ಸಾಯಿ ಪ್ರಕಾಶ್ ಧಾಮ, ಷೆಡ್ಯೂಲ್ ಎ ಆಸ್ತಿಯಲ್ಲಿ ನಿರ್ಮಿಸಲಾಗಿದ್ದು, ಇದರ ಸರಿಸುಮಾರು ವಿಸ್ತೀರ್ಣ 1745 ಚದರ ಅಡಿ ಸೂಪರ್ ಬಿಲ್ಟ್ ಅಪ್ ಪ್ರದೇಶ, ಜೊತೆಗೆ 1536 ಚದರ ಅಡಿ ನಿರ್ಮಿತ ಪ್ರದೇಶ ಮತ್ತು ಸರಿಸಮನಾದ ಭಾಗ ಸಾಮಾನ್ಯ ಪ್ರದೇಶ, ಪ್ಯಾಸೇಜ್, ಲಾಬೀಸ್, ಲಿಫ್ಟ್, ಸ್ಟೈರ್‌ಕೇಸ್ ಮತ್ತು ಇತರೆ ಸಾಮಾನ್ಯ ಪ್ರದೇಶಗಳ ಜೊತೆಗೆ ವಿಸ್ತೀರ್ಣ 209 ಚದರ ಅಡಿ ಮತ್ತು ನೆಲಮಾಳಿಗೆಯಲ್ಲಿ ಒಂದು ಮುಚ್ಚಿದ ಕಾರು ನಿಲ್ಲಿಸುವ ಸ್ಥಳವನ್ನು ಹೊಂದಿದೆ ಮತ್ತು **ಚಕ್ಕುಬಂದಿ : ಪೂರ್ವಕ್ಕೆ : ನೆಲ ಹಂತದ ಸಾಮಾನ್ಯ ಪ್ರದೇಶ ಮತ್ತು ಕಾಂಪೌಂಡ್ ವಾಲ್, ಪಶ್ಚಿಮಕ್ಕೆ: ಎಂಟ್ರೇನ್ಸ್ ಪ್ಯಾಸೇಜ್, ಉತ್ತರಕ್ಕೆ : ಅಪಾರ್ಟ್‌ಮೆಂಟ್ ನಂ.104 ಬಿ ವಿಂಗ್ 1ನೇ ಮಹಡಿ, ದಕ್ಷಿಣಕ್ಕೆ : ನೆಲ ಹಂತದ ಸಾಮಾನ್ಯ ಪ್ರದೇಶ ಮತ್ತು ಕಾಂಪೌಂಡ್ ವಾಲ್.**

ಬ್ಯಾಂಕ್‌ನ ಅನುಮೋದಿತ ಸೇವಾ ಪೂರೈಕೆದಾರರಾದ ಮೆ॥ ಸಿ1 ಇಂಡಿಯಾ ಪ್ರೈವೇಟ್ ಲಿಮಿಟೆಡ್ ಮೂಲಕ ಇವರ ವೆಬ್ ಪೋರ್ಟಲ್ **www.bankeauctions.com** ನಲ್ಲಿ ಹರಾಜನ್ನು ಆನ್‌ಲೈನ್‌ನಲ್ಲಿ ನಡೆಸಲಾಗುತ್ತದೆ. ಯಾವುದೇ ಕಾರಣವನ್ನು ನೀಡದೆ ಯಾವುದೇ ಸಮಯದಲ್ಲಿ ಇ–ಹರಾಜನ್ನು ರದ್ದುಗೊಳಿಸಲು ಅಧಿಕೃತ ಅಧಿಕಾರಿಯವರು ಸಂಪೂರ್ಣ ಅಧಿಕಾರವನ್ನು ಹೊಂದಿರುತ್ತಾರೆ.
ಆನ್‌ಲೈನ್ ಇ–ಹರಾಜು ಬಿಡ್ ಫಾರ್ಮ್, ಘೋಷಣೆ ಇತ್ಯಾದಿಗಳನ್ನು ಹೊಂದಿರುವ ಇ–ಹರಾಜು ಮಾರಾಟದ ಟೆಂಡರ್ ಡಾಕ್ಯುಮೆಂಟ್‌ನ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು **www.bankeauctions.com** ಮತ್ತು **https://auctions.kotak.com/properties/auction-notices/** ನಲ್ಲಿ ಒದಗಿಸಲಾದ ಲಿಂಕ್‌ನ್ನು ವೀಕ್ಷಿಸಿ ಮತ್ತು ಶ್ರೀ ಶೇಷ ಶ್ರೀನಿವಾಸನ್ ಎಂ, ಶ್ರೀಧರ್ ಬಿ & ಕರುಣ್ ಬಿ (+919620077611 & 8655928069 ಇವರನ್ನು ಸಂಪರ್ಕಿಸಬಹುದು

**ದಿನಾಂಕ: 31–07–2024**
**ಸ್ಥಳ : ಬೆಂಗಳೂರು**
ಸಹಿ/– ಅಧಿಕೃತ ಅಧಿಕಾರಿಗಳು,
ಕೋಟಕ್ ಮಹೀಂದ್ರ ಬ್ಯಾಂಕ್ ಲಿ.,

CMYK